ಇ) ಕ್ರೋಡಿಕೃತ ಕಬಿನಿ ಯೋಜನೆಯಿಂದ ಪ್ರಯೋಜನ ಹೊಂದಿರುವ ತಾಲ್ಲೂಕುಗಳು ಹೆಗ್ಗಡ ದೇವನಕೋಟೆ, ನಂಜನಗೂಡು, ಯಳಂದೂರು, ಟಿ. ನರಸೀಪುರ, ಚಾಮರಾಜ ನಗರ, ಕೊಳ್ಳೆಗಾಲ ಮತ್ತು ಗುಂಡ್ಲುಪೇಟೆ.

ಈ) ಕ್ರೋಡಿಕೃತ ಕಬಿನಿ ಯೋಜನೆಯಿಂದ ಮುಳುಗಡೆಯಾಗಲಿರುವ ಕಂದಾಯ ಮತ್ತು ಅರಣ್ಯ ಭೂಮಿ ಪ್ರದೇಶ ಸುಮಾರು ೧೨,೪೭೩ ಹೆಕ್ಟೇರುಗಳು ಕ್ರೋಡಿಕೃತ ಯೋಜನೆಯ ವಿಷದವಾದ ಸಮೀಕ್ಷಾ ಕಾರ್ಯ ಮುಗಿದ ನಂತರ ಮುಳುಗಡೆಯಾಗಲಿರುವ ಕಂದಾಯ ಮತ್ತು ಅರಣ್ಯ ಭೂಮಿಗಳ ವಿವರಗಳನ್ನು ತಿಳಿಯಬಹುದು.

ಶ್ರೀ ಎಂ. ಶಿವಣ್ಣ —ಮಾನ್ಯ ಅಧ್ಯಕ್ಷರೇ, ಕಬಿನಿ ಯೋಜನೆಯನ್ನು ಒಂದು ಹಂತದಲ್ಲಾದರೂ ಮಾಡಲಿ ಎರಡು ಹಂತದಲ್ಲಾದರೂ ಮಾಡಲಿ ಮಾನ್ಯ ಮಂತ್ರಿಯವರು ಉತ್ತರ ಕೊಡುವಂಥ ಸಂದರ್ಭದಲ್ಲಿ ಕ್ರೋಢೀಕೃತ ಯೋಜನೆಯಿಂದ ಉಪಯೋಗವಾಗುವತಾಲ್ಲೂಕುಗಳಲ್ಲಿ ಹೆಗ್ಗಡ ದೇವನ ಕೋಟೆ ಕೂಡ ಇದೆಯೆಂದು ಹೇಳಿದ್ದಾರೆ. ನನ್ನ ಕ್ಷೇತ್ರವಾದ ಹೆಗ್ಗಡದೇವನ ಕೋಟೆಯ ಅರ್ಧ ಭಾಗ ಕಬಿನ ಜಲಾಶಯ ನಿರ್ಮಾಣದಿಂದ ಮುಳುಗಡೆಯಾಗುವಂಥ ಕಷ್ಟ ಬಂದಿತ್ತು. ಈಗ ಕ್ರೋಢೀಕೃತ ಯೋಜನೆಯ ಮೇರೆಗೆ ಮುಳುಗಡೆಯಾಗುತ್ತಿರುವ ೧೨,೪೭೩ ಹೆಕ್ಟೇರ್ ಪ್ರದೇಶ ಕೂಡ ನನ್ನ ಕ್ಷೇತ್ರದಲ್ಲಿಯೇ ಮುಳುಗಡೆಯಾಗುತ್ತದೆ. ನಮ್ಮ ತಾಲ್ಲೂಕಿನಲ್ಲಿ ೨-೩ ಸಾವಿರ ಎಕರೆ ಮಾತ್ರ ನೀರಾವರಿಯಾಗಬಹುದು. ಯಾವ ಯಾವ ತಾಲ್ಲೂಕುಗಳಲ್ಲಿ ಎಷ್ಟೆಷ್ಟು ಹೆಕ್ಟೇರ್‌ಗಳಷ್ಟು ಪ್ರದೇಶ ಮುಳುಗಡೆಯಾಗುತ್ತದೆ. ಕಬಿನಿ ಯೋಜನೆಯಲ್ಲಿ ಮುಳುಗಡೆಯಾದ ೩೩ ಹಳ್ಳಿಗಳಿಗೆ ಇದುವರೆ ವಿಗೂ ಸರ್ಕಾರದ ವತಿಯಿಂದ ಸೌಲಭ್ಯ ಸಿಕ್ಕಿಲ್ಲ. ಮುಳುಗಡೆಯಾದ ಹಳ್ಳಿಗಳ ಜನರಿಗೆ ಸೌಲಭ್ಯ ಒದಗಿಸಿಕೊಡುವುದಕ್ಕೆ ಆಶ್ವಾಸನೆ ಕೊಡುತ್ತೀರಾ ?

ಶ್ರೀ ಹೆಚ್. ಡಿ. ದೇವೇಗೌಡ.—ಮಾನ್ಯ ಸದಸ್ಯರಿಗೆ ಪೂರ್ಣ ವಿವರ ತರಿಸಿಕೊಡುತ್ತೇನೆ. ಕಬಿನಿ ಯೋಜನೆಯನ್ನು ಒಂದೇ ಹಂತದಲ್ಲಿ ಮಾಡಲಾಗುವುದು. ಒಂದು ಎರಡು ಹಂತ ಎಂದು ಇಲ್ಲ. ಸರ್ಕಾರ ಕ್ರೋಢೀಕೃತ ಅಂದಾಜು ವೆಚ್ಚ ೩೯೦ ಕೋಟಿಗೆ ಮಂಜೂರಾತಿ ಕೊಡಲಾಗಿದೆ.

ಅಧ್ಯಕ್ಷರು.—ಮಾನ್ಯ ಸದಸ್ಯರ ಹಕ್ಕುಗಳನ್ನು ಮೊಟಕುಗೊಳಿಸಬಾರದೆನ್ನುವ ದೃಷ್ಟಿಯಿಂದ ಇವತ್ತು ಒಂದು ತಾಸು ಹೆಚ್ಚು ಪ್ರಶ್ನೋತ್ತರ ವೇಳೆಗೆ ಅವಕಾಶ ಮಾಡಿ ಕೊಡಲಾಗಿದೆ. ಈಗ ಪ್ರಶ್ನೋತ್ತರ ವೇಳೆ ಮುಗಿಯಿತು.

ಶ್ರೀ ರಾಮಕೃಷ್ಣ ಹೆಗಡೆ.—ಪ್ರತಿದಿವಸ ಹೀಗೆ ಮಾಡುತ್ತೀರೇನು ?

ಅಧ್ಯಕ್ಷರು.—ಹಾಗಿಲ್ಲ, ಮೊದಲನೆಯ ದಿವಸ ಎಂದು ಬಿಟ್ಟು ಕೊಟ್ಟಿದ್ದೇನೆ. ಈಗ ಲಿಖಿತ ಮೂಲಕ ಉತ್ತರಿಸಬಹುದಾದ ಪ್ರಶ್ನೆಗಳು

ಚುಕ್ಕೆ ಗುರುತಿಲ್ಲದ ಪ್ರಶ್ನೆಗಳಿಗೆ ಲಿಖಿತ ಮೂಲಕ ನೀಡಲಾದ ಉತ್ತರಗಳು

ಶ್ರೀ ಎ. ಲಕ್ಷ್ಮೀಸಾಗರ್.—ಲಿಖಿತ ಮೂಲಕ ಉತ್ತರಿಸಬಹುದಾದ ಪ್ರಶ್ನೆಗಳನ್ನು ಸಭೆಯ ಮುಂದೆ ಇಡುತ್ತೇನೆ.

ಅಧ್ಯಕ್ಷರು.— ಪಟ್ಟಿಯನ್ನು ಸಭೆಯ ಮುಂದೆ ಇಡಲಾಗಿದೆ.

ವಿಶ್ವ ಬ್ಯಾಂಕಿನಿಂದ ನೆರವು ಪಡೆದು ನಿರ್ಮಿಸುತ್ತಿರುವ ರಾಜಾಪುರ ಕೆರೆಯ ಬಗ್ಗೆ

೨೭೧ ಶ್ರೀ ಯು. ಭೂಪತಿ.—ಮಾನ್ಯ ಲೋಕೋಪಯೋಗಿ, ಅಚ್ಚುಕಟ್ಟು ಪ್ರದೇಶಾಭಿವೃದ್ಧಿ ಮಂತ್ರಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಸಂಡೂರು ತಾಲೂಕಿನ ರಾಜಾಪುರ ಕೆರೆಗೆ ವಿಶ್ವ ಬ್ಯಾಂಕ್‌ನಿಂದ ದೊರೆಯುವ ಒಟ್ಟು ಹಣವೆಷ್ಟು ?

ಆ) ಈ ಕೆರೆಯಂ ಇತ್ತೀಚೆಗೆ ಸ್ವಲ್ಪ ಮಳೆ ಬಂದಾಗ ಒಡೆದುಹೋಗಿದ್ದು, ಸರ್ಕಾರದ ಗಮನಕ್ಕೆ ಬಂದಿದೆಯೇ ? ಹಾಗಿದ್ದಲ್ಲಿ ಅದಕ್ಕೆ ಕಾರಣವೇನು ?

ಇ) ಈ ಬಗ್ಗೆ ಸರ್ಕಾರದವರು ಯಾವ ಕ್ರಮ ಕೈಗೊಂಡಿದ್ದಾರೆ ?

ಶ್ರೀ ಹೆಚ್. ಡಿ. ದೇವೇಗೌಡ (ಮಾನ್ಯ ಲೋಕೋಪಯೋಗಿ ಮಂತ್ರಿಗಳು).--

ಅ) ರೂ. ೪೩,೪೯,೬೦೦

ಆ) ಕೆರೆಯಂ ಒಡೆದಿಲ್ಲ ಪ್ರಶ್ನೆ ಉದ್ಭವಿಸುವುದಿಲ್ಲ

ಇ) ಪ್ರಶ್ನೆ ಉದ್ಭವಿಸುವುದಿಲ್ಲ

ಬರಗಾಲ ಪ್ರದೇಶದ ರೈತ ಕುಟುಂಬಕ್ಕೆ ಧಾನ್ಯದ ಸಾಲ ಯೋಜನೆಯ ಬಗ್ಗೆ.

೧೨೭. ಶ್ರೀ ಜಿ. ರಾಜೂಗೌಡ (ಹನೂರು).--ಮಾನ್ಯ ಕೃಷಿ ಮಂತ್ರಿ ತೋಟಗಾರಿಕೆ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಬರಗಾಲ ಪ್ರದೇಶದ ಪ್ರತಿ ರೈತ ಕುಟುಂಬಕ್ಕೆ ಧಾನ್ಯದ ಸಾಲ ನೀಡುವ ಯೋಜನೆಯನ್ನು ಜಾರಿಗೆ ತರುವುದಾಗಿ ಹಿಂದಿನ ಕೃಷಿ ಖಾತೆ ರಾಜ್ಯ ಸಚಿವರು ವಿಧಾನ ಸಭೆಯಲ್ಲಿ ಘೋಷಿಸಿದ್ದರು ನಿಜವಲ್ಲವೇ, ?

ಆ) ಹಾಗಿದ್ದಲ್ಲಿ, ಈ ದಿಶೆಯಲ್ಲಿ ಸರ್ಕಾರದವರು ಕೈಗೊಂಡಿರುವ ಕ್ರಮಗಳೇನು ?

ಶ್ರೀ ಬಸವರಾಜ್ ಪಾಟೀಲ್ ಅನ್ವರಿ (ಕೃಷಿ ಮತ್ತು ತೋಟಗಾರಿಕೆ ರಾಜ್ಯ ಸಚಿವರು).--

ಅ) ಹೌದು.

ಆ) ಈ ಬಗ್ಗೆ ಕೇಂದ್ರ ಸರ್ಕಾರಕ್ಕೆ ಪ್ರಸ್ತಾವನೆಯನ್ನು ಕಳುಹಿಸಲಾಗಿದೆ

ಹಿಪ್ಪರಗಿ ಅಣೆಕಟ್ಟಿನ ಬಗ್ಗೆ

೧೫೭. ಶ್ರೀಮತಿ ಲೀಲಾದೇವಿ ಆರ್. ಪ್ರಸಾದ್ (ಅಥಣಿ).--ಮಾನ್ಯ ಲೋಕೋಪಯೋಗಿ ಅಚ್ಚುಕಟ್ಟು ಪ್ರದೇಶ ಅಭಿವೃದ್ಧಿ ಮತ್ತು ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

ಅ) ಅಥಣಿ ತಾಲ್ಲೂಕಿನ ಹಿಪ್ಪರಗಿ ಅಣೆಕಟ್ಟಿನ ಕೆಲಸ ರಾಜ್ಯದ ೧೯೮೬-೮೭ನೇ ಸಾಲಿನ ಆಯವ್ಯಯ ಪಟ್ಟಿಯಲ್ಲಿ ಹಣ ಒದಗಿಸಿದ್ದರೂ ಕೆಲಸ ಪ್ರಾರಂಭವಾಗದಿರಲು ಕಾರಣವೇನು ?

ಆ) ಈಗ ಅದು ಯಾವ ಹಂತದಲ್ಲಿದೆ ?

ಶ್ರೀ ಹೆಚ್. ಡಿ. ದೇವೇಗೌಡ (ಲೋಕೋಪಯೋಗಿ ಮತ್ತು ನೀರಾವರಿ ಮಂತ್ರಿಗಳು).--

ಅ) ೧೯೮೬-೮೭ನೇ ಸಾಲಿನ ಆಯವ್ಯಯ ಪಟ್ಟಿಯಲ್ಲಿ ಹಿಪ್ಪರಗಿ ಅಣೆಕಟ್ಟು ಯೋಜನೆಗೆ ಒದಗಿಸಿರುವ ಒಟ್ಟು ೫೦ ಲಕ್ಷ ರೂ. ಗಳ ಅನುದಾನವನ್ನು ಉಪಯೋಗಿಸಿಕೊಳ್ಳಲು ಕಾರ್ಯಗಳನ್ನು ಕೈಗೆತ್ತಿಕೊಳ್ಳಲಾಗಿದೆ

ಆ) ಎಡ ಹಾಗೂ ಬಲ ಬದಿಯ ೫೧೧೫ ಮಿ. ಉದ್ದದ ವಿಣ್ಣಿ ಒಡ್ಡಿನ ಕಾಮಗಾರಿ ಮುಗಿಯುವ ಹಂತದಲ್ಲಿದ್ದು, ಕೋಡಿ (ಸ್ಪಿಲ್‌ವೇ)ಯ ತಳಪಾಯದ ಕಾಂಕ್ರೀಟನ್ನು ಹಾಕಲಾಗಿದೆ.

ಗುಲ್ಬರ್ಗಾ ರಾಯಚೂರು ರಸ್ತೆಯ ಬಗ್ಗೆ

೧೫೧. ಶ್ರೀ ಕೆ. ಬಿ. ಶಾಣಪ್ಪ (ಶಹಾಬಾದ್).— ಮಾನ್ಯ ಲೋಕೋಪಯೋಗಿ ಅಚ್ಚುಕಟ್ಟು ಪ್ರದೇಶ ಅಭಿವೃದ್ಧಿ ಮಂತ್ರಿ ನೀರಾವರಿ ಮಂತ್ರಿಗಳು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ ?

(ಅ) ಗುಲ್ಬರ್ಗಾ-ರಾಯಚೂರು ರಸ್ತೆಯ ಉದ್ದಳತೆ ಎಷ್ಟು ?

(ಆ) ಇದನ್ನು ಯಾವ ವರ್ಷದಲ್ಲಿ ಬಿ.ಟಿ. ರಸ್ತೆಯನ್ನಾಗಿ ಮಾಡಬೇಕೆಂದು ನಿರ್ಧರಿಸಲಾಗಿತ್ತು ಹಾಗೂ ಅದಕ್ಕಾಗಿ ಕಾದಿರಿಸಿದ ಹಣವೆಷ್ಟು ?